ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

ಪಟ್ಟಿ – ೫

# ಕರ್ನಾಟಕ ವಿಧಾನ ಪರಿಷತ್ತು

**ನೂರ ನಲವತ್ತಮೂರನೆಯ ಅಧಿವೇಶನ**

**ಗುರುವಾರ, ದಿನಾಂಕ: ೦೪ನೇ ಫೆಬ್ರವರಿ, ೨೦೨೧**

---

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

೩. ಸಣ್ಣ ನೀರಾವರಿ ಸಚಿವರು

೪. ಜಲ ಸಂಪನ್ಮೂಲ ಸಚಿವರು

೫. ಅಬಕಾರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಯೋಜನಾ ಸಚಿವರು

---

## ಬೆಂಗಳೂರಿನಲ್ಲಿ ತ್ಯಾಜ್ಯ ನೀರಿನ ಸಂಸ್ಕರಣೆ ಕುರಿತು

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

೬೧ (೪೬೬) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರಿನಲ್ಲಿ ತ್ಯಾಜ್ಯ ನೀರಿನ ಸಂಸ್ಕರಣೆಯು ನಿಗಧಿತ ಮಾನದಂಡಕ್ಕೆ ಅನುಗುಣವಾಗಿದೆಯೇ ; ಇಲ್ಲದಿದ್ದಲ್ಲಿ, ಕಾರಣಗಳೇನು ;

(ಆ) ಬೆಂಗಳೂರಿನ ಕೆರೆಗಳ ಕಲುಷಿತಕ್ಕೆ ಸದರಿ ತ್ಯಾಜ್ಯ ನೀರು ಕಾರಣವಾಗಿರುವುದನ್ನು ಸರ್ಕಾರ ಯಾವ ರೀತಿ ಗುರುತಿಸುತ್ತಿದೆ ;

(ಇ) ತ್ಯಾಜ್ಯ ನೀರಿನ ಸಂಸ್ಕರಣೆ ಬಗ್ಗೆ ಕೇಂದ್ರದ ಹಸಿರು ನ್ಯಾಯಾಧೀಕರಣಕ್ಕೆ ಪ್ರಕರಣ ಸಲ್ಲಿಸಿರುವ ಬಗ್ಗೆ ಸರ್ಕಾರದ ಕ್ರಮಗಳೇನು ;

(ಈ) ಸದರಿ ಅವಘಡಗಳಿಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಉಸ್ತುವಾರಿ ಸಿವಿಲ್ ಇಂಜಿನೀಯರ್‌ಗಳನ್ನು ಹೊರತುಪಡಿಸಿ ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಮೆಕಾನಿಕಲ್ ಇಂಜಿನೀಯರ್ ಪದವೀಧರರನ್ನು ಮುಖ್ಯ ಇಂಜಿನೀಯರ್‌ಗಳನ್ನಾಗಿ ಹೊಂದಿರುವುದು ಕಾರಣವಲ್ಲವೇ ;

(ಉ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಸಿವಿಲ್ ಇಂಜಿನೀಯರ್‌ಗಳನ್ನು ಮುಖ್ಯ ಇಂಜಿನೀಯರ್‌ಗಳನ್ನಾಗಿ ನೇಮಕ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುತ್ತದೆ ?

## ರೈತರ ಕೃಷಿ ಭೂಮಿಗೆ ಕೊಳವೆ ಬಾವಿಯಿಂದ ನೀರು ಹರಿಸುವ ಸಂಬಂಧ ವಿದ್ಯುತ್ ಸಂಪರ್ಕ (ಟಿ.ಸಿ.) ನೀಡುವ ಕುರಿತು

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೬೨ (೪೫೪೮) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಂಡ್ಯ ಜಿಲ್ಲೆ ನಾಗಮಂಗಲ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರೈತರ ಕೃಷಿ ಭೂಮಿಗೆ ಕೊಳವೆ ಬಾವಿಯಿಂದ ನೀರು ಹರಿಸುವ ಸಂಬಂಧ ವಿದ್ಯುತ್ ಸಂಪರ್ಕ (ಟಿ.ಸಿ) ನೀಡಲು ಯಾವ ಹೊಸ ಯೋಜನೆ ಕೈಗೊಳ್ಳಲಾಗಿದೆ ; (ಯೋಜನೆಗೆ ಸಂಬಂಧಿಸಿದ ಸುತ್ತೋಲೆ ನೀಡುವುದು)

(ಆ) ನಾಗಮಂಗಲ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈ ಯೋಜನೆಯನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರು ಯಾರು ; ಅಂದಾಜು ಮೊತ್ತವೆಷ್ಟು ; (ಸಂಪೂರ್ಣ ವಿವರ ನೀಡುವುದು)

(ಇ) ರೈತರ ಕೃಷಿ ಭೂಮಿಯ ಪಂಪ್‌ಸೆಟ್‌ಗೆ ಸಂಪರ್ಕ ಕಲ್ಪಿಸುವ ಟ್ರಾನ್ಸ್‌ಫಾರ್ಮರ್ (ಟಿ.ಸಿ) ಹಾಳಾದರೆ ಎಷ್ಟು ದಿನಗಳಲ್ಲಿ ಬದಲಾವಣೆ ಮಾಡಿ ಹೊಸ/ರಿಪೇರಿ ಮಾಡಲಾದ ಟಿ.ಸಿ. ಅಳವಡಿಸಲಾಗುವುದು ; (ಸರ್ಕಾರದ ಸುತ್ತೋಲೆ ಒದಗಿಸುವುದು)

(ಈ) ಈ ಸಂಬಂಧ ಹಾಳಾದ/ಕೆಟ್ಟಿರುವ ಟಿ.ಸಿ. ಬದಲಾವಣೆ ಮಾಡಲು ನಾಗಮಂಗಲ ತಾಲ್ಲೂಕು ಹೊಣಕೆರೆ ಹೋಬಳಿಯ ಕಿರಿಯ ಅಭಿಯಂತರರು ರೈತರಿಂದ ಹಣ ಕೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?

## ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ತ್ಯಾಜ್ಯದ ರಾಶಿಯನ್ನು ತೆರವುಗೊಳಿಸುವ ಬಗ್ಗೆ

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು) –**

೬೩ (೪೩೩) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆಯ ಎರಡು ಬದಿಯಲ್ಲಿ ಅಲ್ಲಲ್ಲಿ ತ್ಯಾಜ್ಯದ ರಾಶಿ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇದರಿಂದ ನಗರದ ಸಾರ್ವಜನಿಕರ ಆರೋಗ್ಯಕ್ಕೆ ಹಾನಿ ಉಂಟಾಗಿ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕೂಡಲೇ ಈ ತ್ಯಾಜ್ಯದ ರಾಶಿಯನ್ನು ತೆಗೆದು ಸ್ವಚ್ಛಗೊಳಿಸಿ ಪರಿಸರ ನೈರ್ಮಲ್ಯಕ್ಕೆ, ನಗರದ ಅಂದಕ್ಕೆ ಗಮನ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಈ) ಸಿ.ಸಿ. ಕ್ಯಾಮರಗಳನ್ನು ಅಳವಡಿಸಿ ತ್ಯಾಜ್ಯವನ್ನು ಸುರಿಯುವವರನ್ನು ಪತ್ತೆ ಹಚ್ಚಿ ಅವರಿಗೆ ದಂಡ ವಿಧಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ?

## ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಲ್ಲಿ ಖಾಲಿಯಿರುವ ಹುದ್ದೆಗಳ ನೇಮಕಾತಿ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ ) –**

೬೪ (೩೯೬) ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ಕೇಂದ್ರ ಕಛೇರಿ ಮತ್ತು ಸದರಿ ನಿಗಮದ ಅಧೀನ ಕಛೇರಿಗಳಲ್ಲಿ ಒಟ್ಟು ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು ; (ವೃಂದವಾರು, ವಿವರ ನೀಡುವುದು)

(ಆ) ಅವುಗಳಲ್ಲಿ ಖಾಯಂ, ಗುತ್ತಿಗೆ ಆಧಾರದ ಮೇಲೆ ಮತ್ತು ದಿನಗೂಲಿ ಆಧಾರದ ಮೆಲೆ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ;

(ಇ) ಪ್ರಸ್ತುತ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು ; (ವೃಂದವಾರು ವಿವರ ನೀಡುವುದು)

(ಈ) ಖಾಲಿಯಿರುವ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ಸರ್ಕಾರ ಕ್ರಮಕೈಗೊಂಡಿದೆಯೇ ;

(ಉ) ಹಾಗಿದ್ದಲ್ಲಿ, ಸದರಿ ನೇಮಕಾತಿ ಪ್ರಕ್ರಿಯೆಗಳು ಪ್ರಸ್ತುತ ಯಾವ ಹಂತದಲ್ಲಿದೆ ; ಯಾವ ಕಾಲಮಿತಿಯಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗುವುದು ; ಇಲ್ಲವಾದಲ್ಲಿ ನೇಮಕಾತಿ ಮಾಡಿಕೊಳ್ಳದಿರಲು ಕಾರಣಗಳೇನು ?

## ಮಂಡ್ಯ ಜಿಲ್ಲೆಯಲ್ಲಿ ಕಳೆದ ಸಾಲಿನಲ್ಲಿ ಹೊಸದಾಗಿ ಕೈಗೊಂಡ ಕಾಮಗಾರಿಗಳ ಬಗ್ಗೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ ) –**

೬೫ (೪೮೨) ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಂಡ್ಯ ಜಿಲ್ಲೆಯಲ್ಲಿ ಕಳೆದ ಸಾಲಿನಲ್ಲಿ ಜಲಸಂಪನ್ಮೂಲ ಇಲಾಖೆಯ ವತಿಯಿಂದ ಹೊಸದಾಗಿ ಯಾವ ಯಾವ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ ; (ಸಂಪೂರ್ಣ ವಿವರ ಒದಗಿಸುವುದು)

(ಆ) ಸದರಿ ಕಾಮಗಾರಿಯ ಅಂದಾಜು ಮೊತ್ತವೆಷ್ಟು ; (ಪ್ರತ್ಯೇಕವಾಗಿ ವಿವರ ಒದಗಿಸುವುದು)

(ಇ) ಸದರಿ ಕಾಮಗಾರಿಗಳು ಯಾವ ಹಂತದಲ್ಲಿದೆ ;

(ಈ) ಸದರಿ ಕಾಮಗಾರಿಗಳನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು ?

## ರಾಜ್ಯದ ವಿವಿಧ ನಿಗಮಗಳಿಂದ ೨೦೧೯–೨೦, ೨೦೨೦–೨೧ನೇ ಸಾಲಿನಲ್ಲಿ S.C.P. ಮತ್ತು T.S.P. ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಅನುದಾನ

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೬ (೪೨೦) ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ವಿವಿಧ ನೀರಾವರಿ ನಿಗಮಗಳಿಂದ ೨೦೧೯–೨೦, ೨೦೨೦–೨೧ ಸಾಲಿನಲ್ಲಿ S.C.P. ಮತ್ತು T.S.P. ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಅನುದಾನ ಎಷ್ಟು ;

(ಆ) ೨೦೧೯–೨೦, ೨೦೨೦–೨೧ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಗೆ S.C.P. ಮತ್ತು T.S.P. ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಅನುದಾನ ಎಷ್ಟು ;

(ಇ) ಈ ಯೋಜನೆಯಡಿಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ?

## B.M.R.C.L. ನಲ್ಲಿ ಗುತ್ತಿಗೆ ನೌಕರರ ನೇಮಕಾತಿ ಬಗ್ಗೆ

**ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೭ (೪೫೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಮೆಟ್ರೋ ರೈಲು ನಿಗಮ (BMRCL)ದಲ್ಲಿ ಹಾಲಿ ಗುತ್ತಿಗೆಯಡಿ ಕೆಲಸ ನಿರ್ವಹಿಸುತ್ತಿರುವ ಉದ್ಯೋಗಿಗಳು ಎಷ್ಟು ; (ಉದ್ಯೋಗಿ ಹೆಸರು, ಹುದ್ದೆ, ಮಾಸಿಕ ಪಡೆಯುತ್ತಿರುವ ವೇತನ ಸೇವೆಗೆ ಸೇರಿದ ದಿನಾಂಕದೊಂದಿಗೆ ವಿವರವಾದ ಮಾಹಿತಿ ನೀಡುವುದು)

(ಆ) ಸದರಿ ನೌಕರರಲ್ಲಿ ಕರ್ನಾಟಕದವರೆಷ್ಟು ; ಬೇರೆ ರಾಜ್ಯದವರೆಷ್ಟು ; (ಹೆಸರು ವಿಳಾಸದೊಂದಿಗೆ ಮಾಹಿತಿ ನೀಡುವುದು)

(ಇ) ಮೆಟ್ರೋ ನಿಗಮಕ್ಕೆ ಸಾವಿರಾರು ಗುತ್ತಿಗೆ ನೌಕರರನ್ನು ಯಾವ ಮಾನದಂಡದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ ; ದಿನಪತ್ರಿಕೆಯಲ್ಲಿ ಜಾಹೀರಾತು ನೀಡಿ ನೇಮಕ ಮಾಡಿಕೊಳ್ಳಲಾಗಿದೆಯೇ ; (ವಿವರ ನೀಡುವುದು)

(ಈ) ಜನಪ್ರತಿನಿಧಿಗಳು ಶಿಫಾರಸ್ಸು ಮಾಡಿದ ಯಾವ ಅಭ್ಯರ್ಥಿಗಳಿಗೂ ಕೆಲಸ ನೀಡದೆ ಅಧಿಕಾರಿಗಳು ತಮ್ಮ ಮನಸ್ಸಿಗೆ ಬಂದಂತೆ ಗುತ್ತಿಗೆ ನೌಕರರನ್ನು ನೇಮಕಾತಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ನೇಮಕಗೊಂಡ ಗುತ್ತಿಗೆ ನೌಕರರಲ್ಲಿ ಜನಪ್ರತಿನಿಧಿಗಳು ಶಿಫಾರಸ್ಸು ಮಾಡಿದವರೆಷ್ಟು ; ಅಧಿಕಾರಿಗಳು ನೇರವಾಗಿ ನೇಮಕ ಮಾಡಿಕೊಂಡವರೆಷ್ಟು ; (ವಿವರ ನೀಡುವುದು)

(ಉ) ಕನ್ನಡಿಗ ಅಭ್ಯರ್ಥಿಗಳಿಗೆ ಅನ್ಯಾಯ ಮಾಡಿದ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?

## ರಾಜ್ಯದಲ್ಲಿ ಜಾರಿ ಇರುವ ಗ್ರಾಮೀಣ ಭಾರತಕ್ಕೆ ಸಸ್ಯಾಧಾರಿತ ವಿದ್ಯುತ್ ಕುರಿತು

**ಶ್ರೀ ಹೆಚ್.ಎಂ. ರಮೇಶ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)–**

೬೮ (೪೧೧೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಜಾರಿ ಇರುವ "ಗ್ರಾಮೀಣ ಭಾರತಕ್ಕೆ ಸಸ್ಯಾಧಾರಿತ ವಿದ್ಯುತ್" (Biomass Energy for Rural India-BERI) ಯೋಜನೆಯ ನಿರ್ವಹಣೆಯನ್ನು ಯಾವ ಮಂಡಳಿಗೆ ವಹಿಸಲಾಗಿದೆ ;

(ಆ) ಹಾಗಿದ್ದಲ್ಲಿ, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯು ಈ ಯೋಜನೆಯ ಪುನರಾರಂಭಕ್ಕೆ ತಜ್ಞರ ಸಮಿತಿಯನ್ನು ರಚಿಸಲಾಗಿದೆಯೇ ; ಹಾಗಿದ್ದಲ್ಲಿ, ಈ ತಜ್ಞರ ಸಮಿತಿಯನ್ನು ರಚಿಸಿರುವ ಉದ್ದೇಶಗಳೇನು ; ಅದರ ಕಾರ್ಯವ್ಯಾಪ್ತಿ ಏನು ;

(ಇ) ಆ ಸಮಿತಿಯು ವರದಿ ಸಲ್ಲಿಸಲು ಕಾಲಮಿತಿಯೇನಾದರೂ ವಿಧಿಸಲಾಗಿದೆಯೇ ; ಹಾಗಿದ್ದಲ್ಲಿ, ವರದಿ ಸಲ್ಲಿಸುವ ಬಗ್ಗೆ ಸಮಿತಿ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಈ) ಸರ್ಕಾರದ ಮಹತ್ತರವಾದ ಈ ಯೋಜನೆಯ ಅನುಷ್ಠಾನಕ್ಕಾಗಿ ತುಮಕೂರು ಜಿಲ್ಲೆಯಲ್ಲಿ ಕೋಟ್ಯಾಂತರ ರೂಪಾಯಿ ಹಣ ಹೂಡಿಕೆ ಮಾಡಿ ಈ ಯೋಜನೆಯನ್ನು ನಿಲ್ಲಿಸಲು ಕಾರಣಗಳೇನು ; (ವಿವರ ನೀಡುವುದು)

(ಉ) ಈ ಯೋಜನೆಯನ್ನು ಪುನರಾರಂಭಿಸಿದ ನಂತರ ರಾಜ್ಯದ ಎಲ್ಲಾ ಭಾಗಗಳಿಗೂ ವಿಸ್ತರಿಸುವ ಕುರಿತು ಸರ್ಕಾರ ಚಿಂತನೆ ನಡೆಸಿದೆಯೇ ; ಹಾಗಿದ್ದಲ್ಲಿ, ಈ ಯೋಜನೆಯನ್ನು ಯಾವ ಯಾವ ಜಿಲ್ಲೆಗಳಿಗೆ ಮತ್ತು ಯಾವಾಗ ವಿಸ್ತರಿಸಲಾಗುವುದು ; ಈ ಕುರಿತು ಸರ್ಕಾರದ ನಿಲುವೇನು ?

## ಆರ್ಥಿಕ ಮಿತವ್ಯಯ ಆದೇಶ ಹಿಂಪಡೆಯುವ ಬಗ್ಗೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ) –**

೬೯ (೪೭೬) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಅನುದಾನಿತ ಪ್ರಾಥಮಿಕ, ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಹುದ್ದೆ ಭರ್ತಿ ಮಾಡುವ ಕುರಿತಂತೆ ಆರ್ಥಿಕ ಇಲಾಖೆಯು ಆರ್ಥಿಕ ಮಿತವ್ಯಯದ ಆದೇಶ ಹೊರಡಿಸಿ ಹುದ್ದೆ ಭರ್ತಿ ಮಾಡುವುದನ್ನು ತಡೆಹಿಡಿಯಲಾಗಿದೆಯೇ;

(ಆ) ಹಾಗಿದ್ದಲ್ಲಿ, ಪ್ರಸ್ತುತ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯು ಅನುಮತಿ ನೀಡಿದೆ; (ಪ್ರಾಥಮಿಕ ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳ ಹುದ್ದೆವಾರು ವಿವರ ನೀಡುವುದು) ಈಗಾಗಲೇ ಶಿಕ್ಷಣ ಸಂಸ್ಥೆಗಳು ಹುದ್ದೆಗಳನ್ನು ಇಲಾಖೆಯ ನಿಯಮಗಳಿಗುಣವಾಗಿ ಅಧಿಸೂಚನೆ ಹೊರಡಿಸಿ, ನೇಮಕ ಮಾಡಿ ವೇತನ ಪಡೆಯುವ ಹಂತಕ್ಕೆ ಬಂದಿರುವ ಪ್ರಸ್ತಾವನೆಗಳ ಸಂಖ್ಯೆ ಎಷ್ಟು; ಮತ್ತು ಯಾವುವು; (ಶಿಕ್ಷಣ ಸಂಸ್ಥೆವಾರು, ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳ ವಿವರ ನೀಡುವುದು)

(ಇ) ಈಗಾಗಲೇ ಹುದ್ದೆ ಭರ್ತಿ ಮಾಡಲು ಆರ್ಥಿಕ ಇಲಾಖೆಯ ಅನುಮತಿ ನೀಡಿರುವ ಹುದ್ದೆಗಳ ಸಂಖ್ಯೆ ಎಷ್ಟು; ಅವು ಯಾವುವು ; (ಶಿಕ್ಷಣ ಸಂಸ್ಥೆವಾರು

ವಿವರ ನೀಡುವುದು) ಆರ್ಥಿಕ ಇಲಾಖೆಯು ಹೊರಡಿಸಿರುವ ಆರ್ಥಿಕ ಮಿತವ್ಯಯದ ಆದೇಶವನ್ನು ಹಿಂಪಡೆಯುವಂತೆ ಅಥವಾ ಸಡಿಲಗೊಳಿಸುವಂತೆ ಈಗಾಗಲೇ ಪ್ರಸ್ತಾವನೆಯನ್ನು ಶಿಕ್ಷಣ ಇಲಾಖೆಯು ಮಂಡಿಸಿದೆಯೇ;ಪ್ರಸ್ತಾನೆಯು ಯಾವ ಹಂತದಲ್ಲಿದೆ ; (ಈ ಕುರಿತು ಬಂದಿರುವ ಶಿಫಾರಸ್ಸುಗಳ ಪ್ರತಿ ನೀಡುವುದು)

(ಈ) ಈ ಆದೇಶವನ್ನು ಸಡಿಲಗೊಳಿಸಿ ಖಾಲಿ ಹುದ್ದೆಗಳ ಭರ್ತಿಗೆ ಹಾಗೂ ವೇತನದ ಹಂತಕ್ಕೆ ಬಂದ ಪ್ರಸ್ತಾವನೆಗಳನ್ನು ಅನುಮೋದಿಸಿ ವೇತನ ಬಿಡುಗಡೆಗೊಳಿಸಲು ಆರ್ಥಿಕ ಇಲಾಖೆಯು ಕ್ರಮ ಕೈಗೊಳ್ಳುವುದೇ ?

## ಆಯುಧ ಲೈಸೆನ್ಸ್ ನವೀಕರಿಸುವ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೭೦ (೩೯೯) ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೦೩ ವರ್ಷಗಳಿಂದ ಆಯುಧ ಪರವಾನಗಿ ಕೋರಿ ಸ್ವೀಕೃತವಾದ ಅರ್ಜಿಗಳ ಸಂಖ್ಯೆ ಎಷ್ಟು ; ಅವುಗಳಲ್ಲಿ ಅನುಮತಿ ನೀಡಲಾದ ಅರ್ಜಿಗಳು ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಕಲಬುರಗಿ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಎಷ್ಟು ಆಯುಧ ಪರವಾನಗಿ ನೀಡಲಾಗಿದೆ ; ಮತ್ತು ರದ್ದುಪಡಿಸಲಾದ ಪರವಾನಗಿ ಎಷ್ಟು ; (ವಿವರ ನೀಡುವುದು)

(ಇ) ಆಯುಧ ಪರವಾನಗಿ ನೀಡಲು ಮತ್ತು ಆಯುಧ ಪರವಾನಗಿ ರದ್ದುಪಡಿಸಲು ಅನುಸರಿಸುವ ಮಾನದಂಡಗಳೇನು ;

(ಈ) ಇಲ್ಲಿಯವರೆಗೆ ನವೀಕರಿಸದಿರುವ ಪರವಾನಗಿಗಳ ಸಂಖ್ಯೆ ಎಷ್ಟು ; ಬಾಕಿ ಇರುವ ಪರವಾನಗಿ ಅರ್ಜಿಗಳನ್ನು ನವೀಕರಿಸಲು ವಿಳಂಬಕ್ಕೆ ಕಾರಣಗಳೇನು ?

## ಎತ್ತಿನಹೊಳೆ ಯೋಜನೆ ಅನುಷ್ಠಾನದ ಬಗ್ಗೆ

**ಡಾ. ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ ) –**

೭೧ (೪೫೩) ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಎತ್ತಿನ ಹೊಳೆ ಯೋಜನೆ ಪ್ರಾರಂಭ ಆಗಿದ್ದು ಯಾವಾಗ; ಇದರ ರೂಪುರೇಷೆಗಳೇನು ;

(ಆ) ಈ ಯೋಜನೆಗೆ ಇದುವರೆಗೆ ಖರ್ಚು ಮಾಡಲಾದ ಅನುದಾನ ಎಷ್ಟು ; ಹಾಗೂ ಯೋಜನೆಯ ಪ್ರಗತಿಯು ಯಾವ ಹಂತದಲ್ಲಿದೆ ; (ವಿವರ ನೀಡುವುದು)

(ಇ) ಈ ಯೋಜನೆಯ ಅನುಷ್ಠಾನದಲ್ಲಿ ಭೂ ಸ್ವಾಧೀನ ಪ್ರಕ್ರಿಯೇ ನಿಧಾನಗತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

## ಡಿ.ಜೆ. ಹಳ್ಳಿ ಮತ್ತು ಕೆ.ಜಿ. ಹಳ್ಳಿ ಗಲಭೆ ಪ್ರಕರಣಗಳ ಬಗ್ಗೆ

**ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು) –**

೭೨ (೪೭೫) ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಡಿ.ಜೆ. ಹಳ್ಳಿ ಮತ್ತು ಕೆ.ಜಿ ಹಳ್ಳಿ ಗಲಭೆ ಪ್ರಕರಣಗಳನ್ನು NIA ಮತ್ತು CCB ಎರಡು ತನಿಖಾ ಸಂಸ್ಥೆಗಳು ತನಿಖೆ ನಡೆಸುತ್ತಿರುವ ಹಿನ್ನಲೆಯಲ್ಲಿ ಎರಡು ತನಿಖಾ ಸಂಸ್ಥೆಗಳಿಂದ ಈವರೆಗೂ ಎಷ್ಟು FIR ಗಳು ದಾಖಲಾಗಿದೆ; ಅದರಂತೆ ಎಷ್ಟು ಜನರನ್ನು ಬಂಧಿಸಲಾಗಿದೆ ;

(ಆ) ಪ್ರಕರಣದ ಬಂಧಿತರಲ್ಲಿ ಈವರೆಗೂ ಎಷ್ಟು ಜನರನ್ನು ಅಮಾಯಕರೆಂದು ಬಿಡುಗಡೆ ಮಾಡಲಾಗಿದೆ ;

(ಇ) ಗಲಭೆಯು ಪೂರ್ವ ನಿಯೋಜಿತವೇ ; ಹೌದಾದ್ದಲ್ಲಿ, ಗುಪ್ತಚರ ಇಲಾಖೆಯಿಂದ ಒಳಾಡಳಿತ (ಗೃಹ) ಇಲಾಖೆಗೆ ಮಾಹಿತಿ ಇರಲಿಲ್ಲವೇ ; ಇಲ್ಲದಿದ್ದಲ್ಲಿ ವೈಫಲ್ಯಕ್ಕೆ ಕಾರಣಗಳೇನು ;

(ಈ) ಗಲಭೆಯಿಂದ ಅಪಾರ ಪ್ರಮಾಣದ ಸಾರ್ವಜನಿಕ ಆಸ್ತಿಗೆ ನಷ್ಟ ಉಂಟಾಗಿರುವುದನ್ನು ಅಂದಾಜಿಸಲಾಗಿದೆಯೇ; ಅಂದಾಜಿಸಿದ್ದಲ್ಲಿ, ನಷ್ಟ ಭರಿಸುವ ಬಗ್ಗೆ ಸರ್ಕಾರವು ತಕ್ಷಣಕ್ಕೆ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ವಿವರ ಒದಗಿಸುವುದು)

## ಬೆಂಗಳೂರಿನ ಅಭಿವೃದ್ಧಿ ಪ್ರಾಧಿಕಾರದಿಂದ ವಸತಿ ಸಮುಚ್ಛಯಗಳ ಕುರಿತು

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) –**

೭೩ (೩೯೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಎಷ್ಟು ವಸತಿ ಸಮುಚ್ಛಯಗಳನ್ನು ನಿರ್ಮಿಸಲಾಗಿದೆ ; (ವಿವರ ಒದಗಿಸುವುದು)

(ಆ) ವಸತಿ ಸಮುಚ್ಛಯದಲ್ಲಿ ಎಷ್ಟು ಫ್ಲಾಟ್ ಮಾರಾಟವಾಗಿದೆ ; ಉಳಿದಿರುವ ಫ್ಲಾಟ್‌ಗಳ ಸಂಖ್ಯೆ ಎಷ್ಟು ;

(ಇ) ಹಾಲಿ ಉಳಿದಿರುವ ಫ್ಲಾಟ್‌ಗಳನ್ನು ಮಾರಾಟ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯಿಂದ ವಿದ್ಯುತ್ ಖರೀದಿ ಕುರಿತು

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) –**

೭೪ (೪೪೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಅದಾನಿ ಸಂಸ್ಥೆಯ ಒಡೆತನದ ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ಅಡಿಯಲ್ಲಿ ಈ ಹಿಂದೆ ರಾಜ್ಯದ ವಿದ್ಯುತ್ ಸರಬರಾಜು

ಕಂಪನಿಗಳ ಮೂಲಕ ವಿದ್ಯುತ್ ಖರೀದಿಯ ಒಪ್ಪಂದದ ಅನ್ವಯ ೨೬.೦೫.೨೦೦೫ ರಿಂದ ಮಾರ್ಚ್ ಮಾಹೆ ೨೦೨೦ ರವರೆಗೆ ಪ್ರತಿ ವಿದ್ಯುತ್ ಯುನಿಟ್‌ಗೆ ದರ ರೂ.೧.೪೫/– (Fixed Rate) ನಿಗದಿಯಾಗಿದ್ದು, ಪ್ರಸ್ತುತ ಏಪ್ರಿಲ್ ೨೦೨೦ ರಿಂದ ಪ್ರತಿ ಯುನಿಟ್‌ಗೆ ಕನಿಷ್ಟ ದರ ರೂ.೨.೯೧/– ರಿಂದ ಗರಿಷ್ಟ ದರ ರೂ.೩.೭೨/– ವರೆಗೆ ಖರೀದಿಸುವ ಮೂಲಕ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸುಮಾರು ರೂ.೧೬೦೦ ಕೋಟಿ ರೂಪಾಯಿಗಳ ನಷ್ಟ ಉಂಟಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು ; (ವಿವರ ನೀಡುವುದು)

(ಇ) ಸದರಿ ದುಂದು ವೆಚ್ಚದ ಖರೀದಿಯಿಂದ ಖಾಸಗಿಯುವರೆಗೆ ಲಾಭವಾಗುತ್ತಿದ್ದು, ಸರ್ಕಾರದ ಬೊಕ್ಕಸಕ್ಕೆ ಹಾಗೂ ಸಾರ್ವಜನಿಕರ ವಿಶ್ವಾಸಕ್ಕೆ ದಕ್ಕೆಯಾಗುವ ಕುರಿತು ಸರ್ಕಾರದ ಚಿಂತನೆ ಏನು ; (ವಿವರ ನೀಡುವುದು)

(ಈ) ಅದಾನಿ ಸಂಸ್ಥೆ ಮತ್ತು ರಾಜ್ಯ ಸರ್ಕಾರದ ನಡುವೆ ಏರ್ಪಟ್ಟ ಒಡಂಬಡಿಕೆಗೆ ರಾಜ್ಯ ಸರ್ಕಾರದ ಯಾವ ಯಾವ ಇಲಾಖೆಗಳಿಂದ ಒಪ್ಪಿಗೆಯನ್ನು ಪಡೆಯಲಾಗಿದೆ ? (ಪೂರ್ಣ ಮಾಹಿತಿಯನ್ನು ದಾಖಲೆ ಸಮೇತ ನೀಡುವುದು)

## ಚಿಕ್ಕಬಳ್ಳಿಕೆರೆಯ ಪಿಕಪ್ ನಾಲೆಯ ಅಭಿವೃದ್ಧಿ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ ) –**

೭೫ (೪೨೩) ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಂಡ್ಯ ಜಿಲ್ಲೆ ಕೆರೆಗೋಡು ಹೋಬಳಿ ಚಿಕ್ಕಬಳ್ಳಿ ಕೆರೆಯ ಪಿಕಪ್ ನಾಲೆಯ ಅಭಿವೃದ್ಧಿ ಕಾಮಗಾರಿ ಅಂದಾಜಿನಲ್ಲಿ ಗೂಳೂರು ಬೆಟ್ಟದ ಬಳಿ ೧೫೦ ಮೀ. ಉದ್ದದ ಮೇಲ್ಗಾಲುವೆಯನ್ನು ನಿರ್ಮಿಸುವ ಸಂಬಂಧ ಸಮೀಕ್ಷಾ ಕಾರ್ಯ ಕೈಗೊಂಡು, ವಿನ್ಯಾಸ ಹಾಗೂ ಸಾಧ್ಯಾ ಸಾಧ್ಯತೆ ಬಗ್ಗೆ

ಪರಿಶೀಲನೆಯನ್ನು ಯಾವಾಗ ನಡೆಸಲಾಗಿದೆ; ಸಮೀಕ್ಷಾ ಕಾರ್ಯ ಹಾಗೂ ಸಾಧ್ಯಾ ಸಾಧ್ಯಾತೆಯ ವರದಿಯ ಅಂಶವೇನು ;

(ಆ) ಸದರಿ ಕಾಮಗಾರಿಯನ್ನು ಟೆಂಡರ್ ಪಡೆದ ಗುತ್ತಿಗೆದಾರರು ಒಪ್ಪಂದ ಮಾಡಿಕೊಳ್ಳಲು ನಿರಾಕರಿಸಲು ಕಾರಣಗಳೇನು; ಮರು ಟೆಂಡರ್ ಕರೆಯಲಾಗಿದೆಯೇ; ಮರು ಟೆಂಡರ್ ಕರೆಯದೇ ಇರಲು ಕಾರಣಗಳೇನು;

(ಇ) ಕಾವೇರಿ ನೀರಾವರಿ ನಿಗಮದ ಮಂಡಳಿಯ ೭೦ನೇ ಸಭೆಯಲ್ಲಿ ಈ ಕಾಮಗಾರಿಯನ್ನು ಕೈಬಿಟ್ಟಿರುವುದು ನಿಜವೇ ; ಕಾರಣಗಳೇನು ;

(ಈ) ಸದರಿ ಕಾಮಗಾರಿಯಿಂದ ರೈತರಿಗೆ/ಸಾರ್ವಜನಿಕರಿಗೆ ತುಂಬ ಉಪಯೋಗವಾಗಲಿದ್ದು, ಈ ಕಾಮಗಾರಿಯನ್ನು ಮತ್ತೆ ಕೈಗೆತ್ತಿಕೊಳ್ಳಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಈ ಕುರಿತು ಸರ್ಕಾರದ ನಿಲುವೇನು ;

(ಉ) ಗೂಳೂರು ಬೆಟ್ಟದಿಂದ ಮುಂದಕ್ಕೆ ಬರುವ ನೀರು ಸರಾಗವಾಗಿ ಹರಿಯಲು ಎರಡು ಕಲ್ಲುಬಂಡೆ ಅಡ್ಡಲಾಗಿ ಬಂದಿದ್ದು, ಈ ಕಲ್ಲುಬಂಡೆಗಳನ್ನು ಯಾವಾಗ ತೆರವುಗೊಳಿಸಲಾಗುವುದು ?

**ಕೆ. ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಕಾ.ಸೂ. 721 ಪಿ2

**List of Questions for Oral Answers**

**Total No. of Questions - 15**

# LIST - 05

# KARNATAKA LEGISLATIVE COUNCIL

## ONE HUNDRED AND FORTY THIRD SESSION

## Friday, the 05th February, 2021

---

**GROUP - V**

1. Chief Minister
2. Minister for Home and Law, Parliamentary Affairs and Legislation
3. Minister for Minor Irrigation
4. Minister for Water Resources
5. Minister for Excise
6. Minister for Youth Empowerment and Sports and planning

---

**WASTE WATER TREATMENT IN BENGALURU**

**Smt. Bharathi Shetty (Nominated) -**

61 (466) Will the Chief Minister be pleased to state:-

a) whether the waste water treatment is carrying out as per the prescribed standards in Bengaluru; if not, the reasons therefor;

b) the manner in which the Government is identifying the said waste water which is polluting the lakes in Bengaluru;

c) the measures of the Government regarding the case filed before the Central Green Tribunal about waste water treatment;

d) whether the electrical, electronics, mechanical engineering graduates have appointed as chief engineers by excluding in charge civil engineers of BWSSB is not cause to the said accidents;

e) the actions that would be taken by the Government to appoint civil engineers as chief engineers in Bengaluru Water Supply and Sewerage Board?

**ELECTRICITY CONNECTION TO BOREWELLS**

**Sri N. Appajigowda (Local Authorities Constituency) -**

62 (458) Will the Chief Minister be pleased to state:-

a) the particulars of the new scheme undertaken to provide electricity connection (transformer circuits) for flowing water to farmers' land from borewells in the limits of Nagamangala Legislative Assembly Constituency in Mandya district; (the circular related to scheme be furnished)

b) the name of the contractor who is carrying out the said scheme in the limits of Nagamangala Legislative Assembly constituency; the estimated cost thereof; (complete details be furnished)

c) the number of days within which the failed transformer would be replaced and install new/repaired T.C. which connects the pumpset of farmers' agriculture land; (Government circular be furnished)

d) whether it has come to the notice of the Government that the junior engineer of Honakere Hobli of Nagamangala taluk is demanding money from the farmers to change the non-functioning/failed transformer; if so, the action taken against the said person?

**DISPOSAL OF GARBAGE IN BBMP LIMITS**

**Sri B.K. Hariprasad (Elected by Legislative Assembly) -**

63 (433) Will the Chief Minister be pleased to state:-

a) whether the Government is aware of the fact that the garbage dumped on road sides at some places in the limits of BBMP;

b) whether it has come to the notice of the Government that the garbage is affecting on public of health of the city and causing adverse impact on the environment;

c) whether the Government would take action immediately to clear the garbage and to focus on cleanliness of environment and making city adorable;

d) whether the Government has taken action to impose fine on persons who dump the garbage tracing out by installing C.C. cameras?

**RECRUITMENT OF VACANT POSTS IN KBJNL**

**Sri Nirani Hanamant Rudrappa (Graduates' Constituency) -**

64 (396) Will the Minister for Water Resources be pleased to state:-

a) the total number of posts sanctioned in the head office of Krishna Bhagya Jala Nigam Limited and its field offices; (cadrewise details be furnished)

b) out of which, the number of employees working permanent, on contract basis and on daily wages;

c) the number of vacant posts at present; (cadrewise details be furnished)

d) whether the Government has taken action to fill up the vacant posts;

e) if so, the present stage of the said recruitment process; the timelimit within which recruitment process would be completed; if not, the reasons for not recruiting?

**NEW WORKS IN MANDYA DISTRICT**

**Sri Marithibbe Gowda (Teachers' Constituency) -**

65 (482) Will the Minister for Water Resources be pleased to state:-

a) the particulars of works for which tender has been invited newly by the Water Resources Department in Mandya district during the last year; (complete details be furnished)

b) the estimated cost of the said works; (separate details be furnished)

c) the present stage of the said works;

d) the timelimit within which the said works would be completed?

### GRANTS UNDER S.C.P. AND T.S.P

**Sri R.Prasanna kumar (Local Authorities Constituency) -**

66 (420) Will the Minister for Water Resources be pleased to state:-

a) the grant released under S.C.P and T.S.P for the year 2019-20 and 2020-21 by the various irrigation corporations of the state;

b) the grant released under S.C.P and T.S.P scheme to Shivamogga district for the year 2019-20 and 2020-21;

c) the number of works that would be taken up in Shivamogga district under the said scheme?

### CONTRACT BASIS EMPLOYEES IN BMRCL

**Sri Kantharaj(BML) (Local Authorities Constituency) -**

67 (450) Will the Chief Minister be pleased to state:-

a) the number of employees working on contract basis in Bengaluru Metro Rail Corporation Limited (BMRCL) at present; (detailed information alongwith the name of the employee, post, monthly salary and date of joining to service be furnished)

b) among them, the number of employees belongs to Karnataka; the number of employees of other states; (information alongwith name and address be furnished)

c) the particulars of the criteria on which the thousands of employees appointed on contract basis in BMRCL; whether they have been appointed by publishing advertisement in daily newspaper; (details be furnished)

d) whether it has come to the notice of the Government that the officers have appointed employees on contract basis as per their will and wish without appointing any candidates recommended by the representatives of people; if so, among them, the number of employees appointed through the recommendations of the representatives of people; the number of employees appointed directly by the officers; (details be furnished)

e) the action that would be taken by the Government against the officers who caused injustice to the kannadiga candidates?

**BIOMASS ENERGY FOR RURAL INDIA IN THE STATE**

**Sri H.M. Ramesha Gowda (Elected by Legislative Assembly)-**

68 (414) Will the Chief Minister be pleased to state:-

a) the particulars of the board to which the management of existing "Biomass Energy for Rural India" project has been entrusted in the state;

b) if so, whether the Karnataka State Bio-energy Development Board has constituted experts' committee for re-commencement of the said project; if so, the objectives for constituting the said committee; the jurisdiction of the said committee;

c) whether any timelimit has fixed to submit the report by the committee; if so, the measures taken by the committee to submit the report; (details be furnished)

d) the reasons for stopping the project after investment of crores of rupees in Tumakuru district for implementation of the said significant project of the Government; (details be furnished)

e) whether the Government has contemplated in connection with extending the said project to all parts of the State after re-commencement of this project; if so, the particulars of the districts and the date on which it would be extended; the stands of the Government in this regard?

**WITHDRAWING THE ECONOMY MEASURE ORDER**

**Sri Arun Shahapur (Teachers' Constituency) -**

69 (476) Will the Chief Minister be pleased to state:-

a) whether the Finance department has issued an order of economy measure to withheld the vacant posts in aided primary, secondary and pre-university colleges of primary and secondary education department;

b) if so, the number of posts for which Finance department has accorded approval to fill up at present; (postwise details of primary, secondary and pre-university colleges be furnished) the number of proposals that have already come to the stage for getting salary where the posts of educational institutions have been notified and appointed in accordance with the department rules; and the particulars thereof; (the details of educational institutionwise, primary, secondary and pre-university colleges be furnished)

c) the number of posts that have been accorded approval by the Finance department to fill up the posts at present; the particulars thereof; (educational institutionwise details be furnished) whether the Education department has already proposed to withdraw or relax the economy measure order issued by the Finance department; the present stage of the proposal; (the copy of recommendations received in this regard be furnished)

d) whether the Finance department would take action to release the salary by giving approval to the proposals received for the payment and to fill up the vacant posts by relaxing the said order?

## RENEWAL OF ARMS LICENCE

**Sri Sunil Vallyapur (Elected by Legislative Assembly) -**

70 (399) Will the Minister for Home and Law, Parliamentary Affairs and Legislation be pleased to state:-

a) the number of applications received for seeking arms licence for last 3 years; out of which, the number of applications approved; (talukwise details be furnished)

b) the number of arms licences issued in Kalaburagi district so far; and the number of cancelled licences; (details be furnished)

c) the criteria that would be followed for issuing and cancelling the arms licence;

d) the number of licences not renewed so far; the reasons for the delay for renewing the pending licences applications?

## IMPLEMENTATION OF YETTINAHOLE PROJECT

**Dr.Y.A. Narayanaswamy (Teachers' Constituency) -**

71 (453) Will the Minister for Water Resources be pleased to state:-

a) the date on which Yettinahole project implemented; the outlines of the project;

b) the grant spent for the said project; and the present stage of progress of the project; (details be furnished)

c) whether it has come to the notice of the Government that the land acquisition process is in slow pace while implementing the said project;

d) if so, the steps taken by the Government to rectify the same; the timelimit within which the said project would be completed?

## RIOTS CASES IN D.J.HALLI AND K.G. HALLI

**Sri C.M. Ibrahim (Elected by Legislative Assembly) -**

72 (475) Will the Minister for Home and Law, Parliamentary Affairs and Legislation be pleased to state:-

a) the number of FIRs registered so far by the NIA and CCB investigation agencies which are investigating riots cases taken place in D.J.Halli and K.G. Halli of Bengaluru; the number of persons arrested;

b) among them, the number of persons released so far as innocent;

c) whether it is a pre planned riot; if so, whether the Home department has not got information from Intelligence department; if not, the reasons for failure;

d) whether the huge loss caused to public property has been estimated due to riot; if so, the immediate steps taken by the Government to recover the loss? (complete details be furnished)

## B.D.A. APARTMENTS

**Sri Prakash K. Rathod (Nominated) -**

73 (390) Will the Chief Minister be pleased to state:-

a) the number of apartments constructed by the Bengaluru Development Authority (details be furnished)

b) out of which, the number of flats sold; the number of remaining flats;

c) the steps taken by the Government to sell the remaining flats at present? (details be furnished)

## PURCHASING ELECTRICITY FROM UDUPI POWER CORPORATION LIMITED

**Sri P.R. Ramesh (Nominated) -**

74 (440) Will the Chief Minister be pleased to state:-

a) whether it has come to the notice of the Government that around 1600 crores of rupees loss is being caused to electricity supply companies by purchasing electricity for minimum rate of Rs.2.91/- to maximum rate of Rs.3.72/- per unit from April-2020 at present which was fixed at Rs.1.45/- per unit from 26.05.2005 to March, 2020 as per the earlier electricity purchase agreement with the State electricity supply companies under Adani owned Udupi Power Corporation Limited;

b) if so, the stand of the Government; (details be furnished)

c) the contemplation of the Government regarding the loss being caused to exchequer of the Government and disruption of the faith of public since the private companies are making profit by purchasing with expensive cost; (details be furnished)

d) the particulars of the departments of the State Government from which the approval has been obtained to the memorandum of understanding between Adani company and State Government? (complete information alongwith records be furnished)

## DEVELOPMENT OF PICKUP CANAL IN CHIKKABALLI LAKE

**Sri K.T.Srikantegowda (Graduates' Constituency) -**

75 (423) Will the Minister for Water Resources be pleased to state:-

a) the date on which design and possibility study has carried out after survey work regarding construction of 150 meter long aqueduct canal near Guluru hills for development work of pickup canal of Chickkaballi lake of Keragodu hobli in Mandya district; the points of the report of the survey work and possibility;

b) the reasons for rejecting the agreement by the contractors who have got tender for the said work; whether re-tender has been invited; the reasons for not inviting the re-tender;

c) whether it is true that the said work has been dropped in the 70th meeting of the Kaveri Neeravari Nigam Limited; the reasons therefor;

d) the particulars of steps taken by the Government for undertaking the same work again which is useful to farmers/ public; the stands of the Government in this regard;

e) the timelimit within which the rockstones would be removed which came across the smooth flow of water from Guluru hills?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru - WD-721 Copies